ಸಿರಗುಪ್ಪ ಪಟ್ಟಣಕ್ಕೆ ರಂಗಮಂದಿರ ಮಂಜೂರು ಮಾಡುವುದು.

641 (6603) ಶ್ರೀ ಸೋಮಲಿಂಗಪ್ಪ ಎಂ. ಎಸ್. (ಸಿರಗುಪ್ಪ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಸಿರಗುಪ್ಪ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ರಂಗಮಂದಿರಗಳಿವೆ;

ಆ. ಸಿರಗುಪ್ಪ ಪಟ್ಟಣಕ್ಕೆ ಶಿರುಗು ರಂಗಮಂದಿರದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ತಾಲ್ಲೂಕಿಗೆ ರಂಗಮಂದಿರ ನಿರ್ಮಾಣದಿಂದ ಕ್ಷೇತ್ರದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಬಹುದೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಹಾಗಿದ್ದಲ್ಲಿ. ಇದವರೆವಿಗೂ ರಂಗ ಮಂದಿರ ಒಂದನ್ನು ಮಂಜೂರು ಮಾಡದೆ ಇರಲು ಕಾರಣವೇನು; ಮೌನಕ್ಕೆ ಕಾರಣವೇನು.

ಉ. ಹಾಗಿದ್ದಲ್ಲಿ. ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಯವರು.)

ಅ. 1. ಎರಡು.

2. ಸಿರಗುಪ್ಪ ಪಟ್ಟಣದಲ್ಲಿ ಬಯಲು ರಂಗಮಂದಿರ ನಿರ್ಮಾಣ ಪ್ರಾರಂಭವಾಗಿದೆ.

3. ಸಿರಗುಪ್ಪ ತಾಲ್ಲೂಕು ಶಿರಿಗೇರೆಯಲ್ಲಿ ಬಯಲು ರಂಗಮಂದಿರ ಪೂರ್ಣಗೊಂಡಿದೆ.

ಆ. ಬಂದಿದೆ. ಇಲ್ಲಿನ ಬಯಲು ರಂಗಮಂದಿರ ನಿರ್ಮಾಣಕ್ಕೆ ಈಗಾಗಲೇ ಇಲಾಖೆಯಿಂದ ರೂ.50,00000 ಧನ ಸಹಾಯ ನೀಡಲಾಗಿದೆ.

ಇ. ಹೌದು. ಈ ಉದ್ದೇಶದಿಂದಲೇ ಬಯಲು ರಂಗಮಂದಿರ ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆ.

ಈ. ಉದ್ಭವಿಸುವುದಿಲ್ಲ.

ಉ. ಉದ್ಭವಿಸುವುದಿಲ್ಲ.

ಶ್ರೀ ಎಂ. ಎಸ್. ಸೋಮಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಸಿರಗುಪ್ಪ ಪಟ್ಟಣದಲ್ಲಿ ಒಂದು ರಂಗಮಂದಿರ ಕಟ್ಟಡ ಬೇಕೆಂದು ಕೇಳಿದ್ದೇವೆ. ಆದರೆ ಅದಕ್ಕೆ ಶಿರಿಗೇರಿ ಹಾಗೂ ಸಿರಗುಪ್ಪದಲ್ಲಿ ಬಯಲುರಂಗಮಂದಿರವನ್ನು ಕಟ್ಟಿಸಿದ್ದೇವೆಂದು ಉತ್ತರದಲ್ಲಿ ತಿಳಿಸಿದ್ದಾರೆ ಮತ್ತು ನೀವು ಯಾವಾಗ ರಂಗಮಂದಿರವನ್ನು ಕಟ್ಟಿಸುತ್ತೀರಿ ಎಂದು ಕೇಳಿದರೆ, ಉದ್ಭವಿಸುವುದಿಲ್ಲವೆಂದು ಉತ್ತರಿಸುತ್ತಿದ್ದಾರೆ. ಈ ರೀತಿಯಾದರೆ ಹೇಗೆ? ಸಿರಗುಪ್ಪ ಪಟ್ಟಣದಲ್ಲಿ ಐವತ್ತು ಸಾವಿರಕ್ಕಿಂತ ಹೆಚ್ಚು ಜನರಿದ್ದಾರೆ. ಅಲ್ಲದೆ ಅಲ್ಲಿ ಇಬ್ಬರು ರಾಜ್ಯಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಅಲ್ಲಿ ಇಬ್ಬರು ರಾಜ್ಯಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ ಅಲ್ಲಿ ಯಾವುದೇ ವ್ಯವಸ್ಥೆಯಿಲ್ಲದಿದ್ದರೂ ಸಹಿತ ಅವರು ರಾಜ್ಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಈಗಾಗಲೇ ಅಲ್ಲಿ ಬಯಲು ರಂಗಮಂದಿರವಿದೆ. ಹಾಗಾಗಿ ಯಾವುದೇ ನಾಟಕ, ಕಲೆಗೆ ಎಲ್ಲಾ ರೀತಿಯಲ್ಲಿ ಅನುಕೂಲವಾಗುವಂತೆ ಹಾಗೂ ಅವರಿಗೆ ಪ್ರೋತ್ಸಾಹ ಸಿಗುವಂತಹ ರೀತಿಯಲ್ಲಿ ಒಂದು ರಂಗಮಂದಿರದ

ಅವಶ್ಯಕತೆಯಿರುವುದರಿಂದ ನಮಗೆ ಒಂದು ರಂಗಮಂದಿರವನ್ನು ಕಟ್ಟಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಪಿ ಜಿ ಆರ್. ಸಿಂಧ್ಯಾ : ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರಕೊಡುತ್ತೇನೆ. ಸಿರಗುಪ್ಪ ತಾಲ್ಲೂಕಿನಲ್ಲಿ ರಂಗ ಮಂದಿರವನ್ನು ಕಟ್ಟದೆ ಇರತಕ್ಕದ್ದು ನಿಜ. ಬಯಲು ರಂಗಮಂದಿರಗಳನ್ನು ಕಟ್ಟಲು ಎರಡು ರಂಗ ಮಂದಿರಗಳಿಗೆ ಸ್ವಲ್ಪ ಹಣವನ್ನು ಕೊಟ್ಟಿರತಕ್ಕದ್ದು ನಿಜ. ನಾನು ಅಧಿಕಾರಿಗಳ ಜೊತೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ವಿಚಾರವನ್ನು ಪರಿಶೀಲನೆ ಮಾಡಿದ್ದೇನೆ. ತಾವು ಹೇಳಿರತಕ್ಕ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಸಕ್ತ ನಮ್ಮ ನೀತಿ ಏನು ಎಂದರೆ ಜಿಲ್ಲಾ ಕೇಂದ್ರದಲ್ಲಿ ರಂಗ ಮಂದಿರ ಇರಬೇಕು. ತಾಲ್ಲೂಕು ಮಟ್ಟದಲ್ಲಿ ಬಯಲು ರಂಗ ಮಂದಿರ ಕಟ್ಟಬೇಕು. ಹಣಕಾಸಿನ ಇತಿಮಿತಿಯಿಂದ ಅಷ್ಟೆ. ಇದನ್ನು ಕಟ್ಟಬಾರದು ಎಂದೇನು ಇಲ್ಲ. ಆದ್ದರಿಂದ ಹಣಕಾಸಿನ ಇತಿಮಿತಿಯ ಆಧಾರದ ಮೇಲೆ ಈ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇವೆ. ನಾನು ಒಪ್ಪಿಕೊಳ್ಳುತ್ತೇನೆ, ಸಿರಗುಪ್ಪದಲ್ಲಿ ಬಹಳ ಜನ ಕಲಾವಿದರಿದ್ದಾರೆ, ಅದರ ಜೊತೆಗೆ ಕಲೆಗೆ ಪ್ರೋತ್ಸಾಹ ಕೊಡತಕ್ಕ ದೃಷ್ಟಿಯಿಂದಾಗಿ ರಂಗ ಮಂದಿರ ಕಟ್ಟತಕ್ಕ ಅವಶ್ಯಕತೆ ಇದೆ ಎಂಬುದನ್ನು ನಾನು ಒಪ್ಪುತ್ತೇನೆ. ಹಣಕಾಸಿನ ಇತಿಮಿತಿಯ ಆಧಾರದ ಮೇಲೆ ಅದನ್ನು ಪರಿಶೀಲನೆ ಮಾಡುತ್ತೇನೆ ಎಂಬ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಎಂ. ಕೆ. ಸೋಮಶೇಖರ್, ಎಂ. ಶ್ರೀನಿವಾಸ್‌ರವರು ಗೈರುಹಾಜರಿದ್ದಾರೆ, ಈಗ ಮಾನ್ಯ ಜಿ. ವಿ. ಶ್ರೀರಾಮರೆಡ್ಡಿಯವರು ತಮ್ಮ ಪ್ರಶ್ನೆ ಕೇಳಿ.

ಬಾಗೇಪಲ್ಲಿ ಬಸ್ ಡಿಪೋನಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ

644 (6439) ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ) : ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಾಗೇಪಲ್ಲಿಯ ಬಸ್ ಡಿಪೋ ಬಸ್ಸುಗಳ ಕೊರತೆ, ಸಿಬ್ಬಂದಿಯ ಕೊರತೆಮುಂತಾದ ಮೂಲಭೂತ ಸೌಲಭ್ಯಗಳ ಕೊರತೆಯಿಂದ, ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಈ ಮೂಲಭೂತ ಸೌಕರ್ಯಗಳ ಕೊರತೆಯಿಂದ ಈ ಭಾಗದ ಜನತೆ ಸಾರಿಗೆ ಸೌಲಭ್ಯವಿಲ್ಲದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸರ್ಕಾರ ಬಾಗೇಪಲ್ಲಿ ಬಸ್ ಡಿಪೋಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಜನತೆಗೆ ಉತ್ತಮ ಸಾರಿಗೆ ಸೌಲಭ್ಯ ಒದಗಿಸುವ ಉದ್ದೇಶ ಹೊಂದಿದೆಯೇ;

ಇ. ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು.

ಅ. ಮೂಲಭೂತ ಸೌಕರ್ಯಗಳನ್ನು ಹೊಂದಿದೆ.

ಆ. ಉದ್ಭವಿಸುವುದಿಲ್ಲ.